ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ಹವಾಮಾನ ವಿಭಾಗ
ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65
ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 10.09.2013

ಈ ವಾರದ ಮುನ್ಸೂಚನೆ (ದಿನಾಂಕ 11.09.13– 15.09.13 ವರೆಗೆ)

ನಿಯತಾಂಕಗಳು	11.09.13	12.09.13	13.09.13	14.09.13	15.09.13
ಮಳೆ (ಮಿ.ಮೀ)	12	9	16	6	7
ಗರಿಷ್ಠ ಉಷ್ಣಾಂಶ(ಡಿ.ಸೆ.)	26	27	26	27	28
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	20	20	20
ಮೋಡ (ಪ್ರಮಾಣ)	8	8	7	7	6
ಆರ್ದ್ರತೆ ೭.೨೦ ಬೆ (ಶೇ)	94	94	93	94	93
ಆರ್ದ್ರತೆ ೨.೨೦ ಮ (ಶೇ)	82	81	80	81	82
ಗಾಳಿಯ ವೇಗ (ಕಿ.ಮೀ/ಗಂಟೆಗೆ)	4	5	5	5	4
ಗಾಳಿಯ ದಿಕ್ಕು (ಡಿಗ್ರಿ)	260	260	270	250	260

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಸಂಜೆ ಅಥವಾ ರಾತ್ರಿಯ ವೇಳೆಯಲ್ಲಿ ಸಾಧಾರಣದಿಂದ ಭಾರೀ ಮಳೆಯಾಗುವ ಮುನ್ಸೂಚನೆಯಿದೆ. ದಿನದ ಗರಿಷ್ಠ ಉಷ್ಣಾಂಶವು **26.0-28.0°C** ಮತ್ತು ಕನಿಷ್ಠ **20°C** ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **93-94 %** ಇದ್ದು ಮಧ್ಯಾಹ್ನ **80-82%** ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ **4- 5** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬರುವ ದಿನಗಳಲ್ಲಿ ಮಳೆಯಾಗುವ ನಿರೀಕ್ಷೆಯಿದ್ದು, ಔಷಧಿ ಸಿಂಪರಣೆ ಮಾಡುವಾಗ ಜಾಗರೂಕರಾಗಿರಿ.
- ಸಿಂಪರಣೆ ಮಾಡಲೇಬೇಕಾಗಿ ಬಂದರೆ ಆದಷ್ಟು ಮಧ್ಯಾಹ್ನದ ಒಳಗಾಗಿ ಸಿಂಪಡಿಸಿ.
- ರಸ ಹೀರುವ ಕೀಟಗಳಾದ ಥ್ರಿಪ್ಸ್, ನುಸಿ, ಬಿಳಿ ನೊಣಗಳ ಹಾವಳಿ ಜೋರಾಗಿ ಮಳೆ ಬಿದ್ದರೆ ಸ್ವಾಭಾವಿಕವಾಗಿ ಹತೋಟಿ ಆಗುವುದರಿಂದ ಅವುಗಳ ಹತೋಟಿಗೆ ಕೀಟನಾಶಕಗಳನ್ನು ಈ ಸಂದರ್ಭದಲ್ಲಿ ಬಳಸದಿರಲು ಸ್ರಚಿಸಲಾಗಿದೆ
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಲು ಸೂಚಿಸಲಾಗಿದೆ
  - ಬಸಿಗಾಲುವೆಗಳನ್ನು ಸ್ವಚ್ಚ ಮಾಡಬೇಕು ಮತ್ತು ಹೊಲಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.
  - ಅಲಸಂದೆ ತಳಿಯಾದ ಸಿ–೧೫೨ ಕೂಡ ಅಲ್ಪಾವಧಿ ತಳಿಯಾಗಿದ್ದು, ಬಿತ್ತನೆ ಮಾಡಲು ಸೂಚಿಸಲಾಗಿದೆ.
- ರಾಗಿ, ತೊಗರಿ, ಪಾಪ್ ಕಾರ್ನ್ ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ
- ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆಗಳ ತಳಿಗಳಾದ ಉದ್ದು (ರಶ್ಮಿ), ಅಲಸಂದೆ (ಟಿ.ವಿ.ಎಕ್ಸ್–944), ಅವರೆ (ಹೆಚ್,ಎ–3,4) ಮತ್ತು ಹುರಳಿ (ಕೆ,ಬಿ,ಹೆಚ್–1, ಪಿ,ಹೆಚ್,ಜಿ–9) ಬಿತ್ತನೆ ಮಾಡಬಹುದು.

ಪಾಪ್ ಕಾರ್ನ್:

ಕಾಂಡ ಕೊರೆಯುವ ಹುಳು ಕಂಡುಬಂದರೆ:

ಕ್ಲೋರೊಪೈರಿಫ್ಲಾಸ್ ಅನ್ನು ೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ಗುಲಾಬಿ:

ಕಪ್ಪು ಚುಕ್ಕೆ ರೋಗ:

- ✓ ಕಳೆಗಳನ್ನು ತೆಗೆದು ಹಾಕಿ ಹೊಲವನ್ನು ಸ್ವಚ್ಚವಾಗಿಡಿ.
- ✓ ಉತ್ತಮ ಮಳೆಯಾಗಿರುವುದರಿಂದ ನೀರು ಹಾಯಿಸಬೇಡಿ, ನೀರು ಜಮೀನಿನಲ್ಲಿ ನಿಲ್ಲದಂತೆ ನೋಡಿಕೊಳ್ಳಿ.
- ✓ ರೋಗ ತೀವ್ರವಾಗಿದ್ದಲ್ಲಿ ಮ್ಯಾಂಕೊಜೆಬ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಕವಚ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಮಾಸ್ಟರ್ ಅನ್ನು ಸಿಂಪಡಿಸಿ.

ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್):

ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ್ಲಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ನೋಡಲ್ ಅಧಿಕಾರಿ
ಡಾ||ಎಮ್.ಬಿ. ರಾಜೇಗೌಡ
ಬೆಂಗಳೂರು

This document was created using Smart PDF Creator. To remove this message purchase the product at www.SmartPDFCreator.com